ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 23.09.2024.

**ಮುಖ್ಯ ವಿಚಾರಣೆಃ** ಅರ್ಜಿದಾರ ಪರ ಶ್ರೀ ಜೆ.ಎಸ್.ಟಿ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ಅರ್ಜಿಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದೃಢೀಕೃತ ನಕಲಿನ ದೂರಿನ ಪ್ರತಿಯನ್ನು ನಿಪಿ-1 ಎಂದು, ಪ್ರ.ವರದಿಯನ್ನು ನಿಪಿ-2 ಎಂದು, ಅಂತಿಮ ವರದಿಯನ್ನು ನಿಪಿ-3 ಎಂದು, ಪಂಚನಾಮೆಯನ್ನು ನಿಪಿ-4 ಎಂದು, ಗಾಯದ ಪ್ರಮಾಣ ಪತ್ರ ನಿಪಿ-5 ಎಂದು, ಐಎಂಇ ವರದಿಯನ್ನು ನಿಪಿ-6 ಎಂದು, ಬಿಡುಗಡೆ ಪತ್ರ ನಿಪಿ-7 ಎಂದು, ನೂನ್ಯೊತೆ ಪ್ರಮಾಣ ಪತ್ರವನ್ನು ನಿಪಿ-8 ಎಂದು, ಎಕ್ಸರೆ ವರದಿಯನ್ನು ನಿಪಿ-9 ಎಂದು, ಒಟ್ಟು 91+9 ವೈದ್ಯಕಿಯ ಬೀಲ್‌ಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು. ಎಕ್ಸರೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ಅರ್ಜಿಯಲ್ಲಿ ಕೇಳಿದಂತೆ ಅದೇಶ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರ** ಪರ ವಕೀಲರಿಂದಃ

(ಈ ಹಂತದಲ್ಲಿ ಎದುರುದಾರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**